ಓ.ಎಸ್. ನಂಃ 168/2019

**ಪಿ.ಡಬ್ಲ್ಯೂಃ 1**

**ದಿನಾಂಕ 07.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಎಲ್.ವಿ.ಆರ್ ವಕೀಲರಿಂದಃ**

1. ದಾವಾ ಆಸ್ತಿಯ ಪೋಡ ಸಂಖ್ಯೆ ಸರಿಪಡಿಸಿಕೊಡುವಂತೆ ಕೇಳಿ ಈ ದಾವೆಯನ್ನು ನಾನು ಹೂಡಿರುತ್ತೇನೆ. ದಾವಾ ಆಸ್ತಿಯನ್ನು ದಿಃ 02.02.1966 ರಂದು ನನ್ನ ಗಂಡನ ಮುತ್ತಾತನಾದ ನಂಜೇಗೌಡ ಬಿನ್ ದೇವೇಗೌಡರು ಪೊನ್ನೇಗೌಡ ಬಿನ್ ಜವರೇಗೌಡರಿಂದ ಖರೀದಿಸಿರುತ್ತಾರೆ. ಸರ್ವೆ ನಂಬರ್ 218/3 ರ 12 ಗುಂಟೆ ಜಮೀನನ್ನು ನಂಜೇಗೌಡ ಬಿನ್ ದೇವೇಗೌಡ ಖರೀದಿ ಮಾಡಿದ್ದು, ಸರ್ವೆ ನಂಬರ್ 218/4 ಎಂದು ನಮೂದಾಗಬೇಕಿತ್ತು ಎಂದು ಸಾಕ್ಷಿಯು ನುಡಿದಿರುತ್ತಾರೆ.

2. ನನ್ನ ಗಂಡನ ಮುತ್ತಾತನಾದ ನಂಜೇಗೌಡ ಬಿನ್ ದೇವೇಗೌಡರು ಮರಣ ಹೊಂದಿ ಸುಮಾರು 26 ವರ್ಷಗಳಾಗಿರಬಹುದು. ನಂಜೇಗೌಡ ಬಿನ್ ದೇವೇಗೌಡರವರ ಜೀವಿತಾವಧಿಯಲ್ಲಿಯೇ ನನ್ನ ವಿವಾಹವಾಗಿರುತ್ತದೆ ಎಂದರೆ ಸರಿ. ನಿಪಿ.1 ರ ಖರೀದಿ ಪತ್ರದಲ್ಲಿ ಸರ್ವೆ ನಂಬರ್ ತಪ್ಪಾಗಿ ನಮೂದಾಗಿರುವ ವಿಷಯವು ನಂಜೇಗೌಡ ಬಿನ್ ದೇವೇಗೌಡರ ಮಾಹಿತಿಗೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈಗ 5 ವರ್ಷಗಳ ಹಿಂದೆ ದಾವಾ ಆಸ್ತಿಯ ಮೇಲೆ ಲೋನ್ ಪಡೆಯಲು ಬ್ಯಾಂಕಿಗೆ ದಾಖಲೆಗಳನ್ನು ಸಲ್ಲಿಸಲು ನೋಡಿದಾಗ ನಿಪಿ.1 ರ ಖರೀದಿ ಪತ್ರದಲ್ಲಿ ಸರ್ವೆ ನಂಬರ್ ತಪ್ಪಾಗಿರುವ ಬಗ್ಗೆ ನಮಗೆ ಗೊತ್ತಾಗಿರುತ್ತದೆ.

3. ನಿಪಿ.1 ರ ದಾಖಲೆಯನ್ನು ಬರೆದುಕೊಟ್ಟ ಜವರೇಗೌಡರು ಸುಮಾರು 15 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ಜವರೇಗೌಡರ 2 ಜನ ಗಂಡು ಮಕ್ಕಳು ಸಹ ಮರಣ ಹೊಂದಿದ್ದು, ಸದರಿ ಜವರೇಗೌಡರ ಇಬ್ಬರು ಸೊಸೆಯಂದಿರು ಬದುಕಿದ್ದಾರೆ. ಜವರೇಗೌಡರ ಸೊಸೆಯಂದಿರ ಹೆಸರು ಸಾಕ್ಷಿಯು ಮೊದಲು ರುಕ್ಮೀಣಿ ಹಾಗೂ ರತ್ನಮ್ಮ ಅಂತ ನುಡಿದಿದ್ದು, ನಂತರದಲ್ಲಿ

ನ್ಯಾಯಾಲಯದಲ್ಲಿ ಹಾಜರಿದ್ದು 8 ನೇ ಪ್ರತಿವಾದಿಯು ಜವರೇಗೌಡರ ಇನ್ನೊಬ್ಬ ಸೊಸೆಯ ಹೆಸರು ಕುಮಾರಿ ಎಂದು ಸಾಕ್ಷಿದಾರರಿಗೆ ಹೇಳಿಕೊಟ್ಟಿದ್ದು, ಅದನ್ನು ಕೇಳಿದ ನಂತರ ಸಾಕ್ಷಿಯು ಜವರೇಗೌಡರ ಸೊಸೆಯಂದಿರ ಹೆಸರು ಕುಮಾರಿ ಮತ್ತು ರತ್ನಮ್ಮ ಎಂದು ನಂತರದಲ್ಲಿ ನುಡಿದಿರುತ್ತಾರೆ.

4. ನಿಪಿ.1 ನ್ನು ಬರೆದುಕೊಟ್ಟ ಜವರೇಗೌಡರಿಗೆ 2 ಜನ ಹೆಣ್ಣುಮಕ್ಕಳು ಸಹ ಇರುತ್ತಾರೆ. ಜವರೇಗೌಡರ ಒಬ್ಬ ಹೆಣ್ಣುಮಗಳ ಹೆಸರು ಪಾರ್ವತಮ್ಮ ಅಂತ ಇದ್ದು, ಇನ್ನೊಬ್ಬ ಹೆಣ್ಣು ಮಗಳ ಹೆಸರು ನನಗೆ ಗೊತ್ತಿಲ್ಲ. ದಾವಾ ಎ ಮತ್ತು ಬಿ ಅನುಸೂಚಿ ಆಸ್ತಿಗಳು ಮೂಲತಃ ಜವರೇಗೌಡ ಬಿನ್ ಪೊನ್ನೇಗೌಡರಿಗೆ ಸೇರಿತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

5. ನಿಪಿ.1 ರ ಕ್ರಯಪತ್ರದಲ್ಲಿ ಸರ್ವೆ ನಂಬರ್ ತಪ್ಪಾಗಿ ನಮೂದಾಗಿರುವುದನ್ನು ಸರಿಪಡಿಸಿಕೊಡುವಂತೆ ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಜವರೇಗೌಡ ಬಿನ್ ಪೊನ್ನೇಗೌಡರ ವಾರಸುದಾರರನ್ನು ಕೇಳಿಕೊಂಡಿರುವುದಿಲ್ಲ. ನಿಪಿ.1 ರ ಕ್ರಯಪತ್ರದಲ್ಲಿ ತಪ್ಪಾಗಿ ನಮೂದಾಗಿರುವ ಸರ್ವೆ ನಂಬರ್ ನ್ನು ಸರಿಪಡಿಸಿಕೊಡುವಂತೆ ಈ ದಾವೆಯಲ್ಲಿ ಪರಿಹಾರ ಕೇಳಲು ನಾನು ಜವರೇಗೌಡ ಬಿನ್ ಪೋನ್ನೇಗೌಡರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

6. ದಾವಾ ಆಸ್ತಿಯನ್ನು ನಾನು ಅಳತೆ ಮಾಡಿಸಿರುವುದಿಲ್ಲ. ನಿಪಿ.1 ರಡಿಯಲ್ಲಿ ಖರೀದಿಸಿರುವ ಆಸ್ತಿಯು ಸರ್ವೆ ನಂಬರ್ 218/4 ರಲ್ಲಿ ಇರುತ್ತದೆ ಎಂದು ತೋರಿಸಲು ಸದರಿ ಆಸ್ತಿಯ ಸರ್ವೆ ನಕಾಶೆಯನ್ನು ನೀವು ಮಾಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ಸರ್ವೆ ನಕಾಶೆಯನ್ನು ಮಾಡಿಸಿರುವುದಿಲ್ಲ ಆದರೆ ವಾದಿ ಮಾದೇಗೌಡರು ಮಾಡಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

7. ನಿಪಿ.1 ರ ದಾಖಲೆಯಲ್ಲಿ ಖರೀದಿ ಮಾಡಿದ ಆಸ್ತಿಯ ಸರ್ವೆ ನಂಬರ್ ಸರಿಪಡಿಸಿಕೊಡುವಂತೆ ತಹಸೀಲ್ದಾರಿಗೆ ಅರ್ಜಿಯನ್ನು ನೀಡಿದ್ದೇವೆ. ಸರ್ವೆ ನಂಬರ್ 218 ರಲ್ಲಿ ಎಷ್ಟು ಪೋಡುಗಳಿವೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ಸರ್ವೆ ನಂಬರ್ 218 ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ.

8. ದಾವಾ ಎ ಅನುಸೂಚಿ ಆಸ್ತಿಯು ದ್ಯಾವ ಬಿನ್ ಪೂಜಾರಿ ಚೆನ್ನಪ್ಪ ಎನ್ನುವವರಿಗೆ ಸೇರಿತ್ತು ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಯು ಮಾರಾಟಗಾರರಾದ ಜವರೇಗೌಡ ಬಿನ್ ಪೊನ್ನೇಗೌಡ ರವರಿಗೆ ಸೇರಿರಲಿಲ್ಲ ಬದಲಾಗಿ ದ್ಯಾವ ಬಿನ್ ಪೂಜಾರಿ ಚನ್ನಪ್ಪರವರಿಗೆ ಸೇರಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಜವರೇಗೌಡ ಬಿನ್ ಪೊನ್ನೇಗೌಡ ವಾರಸುದಾರರಾದ ಅವರ ಸೊಸೆಯಂದಿರು ಮತ್ತು ಹೆಣ್ಣುಮಕ್ಕಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದರೆ ಸತ್ಯ ಹೊರಬೀಳುತ್ತದೆ ಎನ್ನುವ ಭಯದಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

9. ನನ್ನ ಮಾವನಾದ ನಂಜೇಗೌಡ ಬಿನ್ ದೇವೇಗೌಡರವರಿಗೆ ಶಿವಣ್ಣೇಗೌಡ, ತಾಯಮ್ಮ, ಕಾಮಾಕ್ಷಿ, ನೀಲಾವತಿ, ಚನ್ನಮ್ಮ ಮತ್ತು ನನ್ನ ಗಂಡನಾದ ಮಾದೇಗೌಡ ಅಂತ 6 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ನಿಪಿ.1 ರಡಿಯಲ್ಲಿ ಖರೀದಿಸಿದ ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ಮಾವನಾದ ನಂಜೇಗೌಡರಿಗೆ ಸೇರಿದ ಇತರೆ ಆಸ್ತಿಗಳಲ್ಲಿ ಅವರ ಗಂಡು ಮಕ್ಕಳ ಮಧ್ಯೆ ಪಾಲುವಿಭಜನೆಯಾಗಿರುತ್ತದೆ.

10. ನಿಪಿ.1 ರಡಿಯಲ್ಲಿ ಖರೀದಿಸಿದ ಆಸ್ತಿಯು ನಂಜೇಗೌಡರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅವರ ಎಲ್ಲ ಮಕ್ಕಳಿಗೂ ಸದರಿ ಆಸ್ತಿಯಲ್ಲಿ ಸಮಾನ ಪಾಲು ಇದೆ ಎಂದರೆ ಸಾಕ್ಷಿಯು ನಂಜೇಗೌಡರ ಹೆಣ್ಣುಮಕ್ಕಳು ಯಾರು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ.1 ರಡಿಯಲ್ಲಿ ಖರೀದಿಸಿದ

ಆಸ್ತಿಯನ್ನು ನಂಜೇಗೌಡರು ತಮ್ಮ ಜೀವಿತಾವಧಿಯಲ್ಲಿ ಯಾರಿಗೂ ಸಹ ಕೊಟ್ಟಿರುವುದಿಲ್ಲ ಎಂದರೆ ಸರಿ. ನಿಪಿ.2 ರ ವಂಶವೃಕ್ಷದಲ್ಲಿ ನಂಜೇಗೌಡರ ಹೆಣ್ಣುಮಕ್ಕಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ದಾವಾ ಎ ಮತ್ತು ಬಿ ಅನುಸೂಚಿ ಆಸ್ತಿಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**